ದಿನಾಂಕ : 26.02.2024
ಅಸಲು ದಾವೆ: 58/2019
ಡಿ .ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಎನ್.ಪಿ. ರವರಿಂದ :</u>**

ನನ್ನ ತಾಯಿ ಆರೋಗ್ಯವಾಗಿ ಇದ್ದಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇರುವುದಿಲ್ಲ. ಅವರು ಕೇಸಿನಲ್ಲಿ ತಕರರು ಸಲ್ಲಿಸಿರುತ್ತಾರೆ. ಅವರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ಇರುವ ಪುಟ್ಟತಾಯಮ್ಮ ಅವರ ಹೆಬ್ಬೆಟ್ಟಿನ ಗುರುತು ಮತ್ತು ನಿಡಿ.1 ಮತ್ತು ವಕಾಲತ್ ನಲ್ಲಿ ಇರುವ ಪುಟ್ಟತಾಯಮ್ಮ ಅವರ ಹೆಬ್ಬೆಟ್ಟಿನ ಗುರುತು ನನ್ನ ತಾಯಿಯದು ಎಂದರೆ ಸಾಕ್ಷಿಯು ನಿಪಿ.7 ರಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.7 ರಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಇದ್ದರೂ ಕೂಡ ಇರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.2 ದಾಖಲೆಗೆ 2019 ರಲ್ಲಿ ಹಾಕಿರುವ ಸಹಿಗಳು ಎಂದರೆ ಸರಿ. ನಿಪಿ.1 ರಲ್ಲಿ ಇರುವ ಆರ್ ಎಂಬ ಅಕ್ಷರವನ್ನು ಹೊರತುಪಡಿಸಿ ನಿಡಿ.2 ರಲ್ಲಿ ಬೇರೆ ರೀತಿ ಸಹಿ ಮಾಡಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಇರುವ ಸಹಿ ಮತ್ತು ನಿಡಿ.2 ರಲ್ಲಿ ಇರುವ ಸಹಿ ಎರಡೂ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.3 ರಲ್ಲಿ ಇರುವ ಸಹಿಯನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಾನು ಮತ್ತು ನನ್ನ ತಾಯಿ ವಾದಿಯ ಪರವಾಗಿ ಕ್ರಯದ ಕರಾರು ಬರೆದುಕೊಟ್ಟಿದ್ದರೂ ಕೂಡ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಬೇರೆ ದಾಖಲೆಗಳಲ್ಲಿ ಸಹಿಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.